11

# ಕೊಡುವುದಕ್ಕೋಸ್ಕರವಾದ ದಿವ್ಯ ಪ್ರೋತ್ಸಾಹಗಳು

## (2 ಕೊರಿಂಥ 8; 9)

*ಪರಿವರ್ತನೆಯ ಜೀವಿತವು ಕೊಡುವ ಜೀವಿತವಾಗಿದೆ ...*

ತಾನು ಹೇಗೆ ಸಮೃದ್ಧಿಯುಳ್ಳವನಾಗಿರುತ್ತಾನೋ ಹಾಗೆಯೇ ತಾನು ಕೊಡುವದನ್ನು ದೇವರು ಬಯಸುವವನಾಗಿರುತ್ತಾನೆ ಎಂದು ಪ್ರತಿಯೊಬ್ಬ ಕ್ರೈಸ್ತನೂ ಬಲ್ಲವನಾಗಿದ್ದಾನೆ. ನಮಗೆ ಸಂಬಂಧಿಸಿದ ಪ್ರಶ್ನೆಯೆಂದರೆ ನಾವು ಕೊಡಬೇಕೋ ಅಥವಾ ಇಲ್ಲವೋ ಎಂಬುದಲ್ಲ ಆದರೆ ಎಷ್ಟನ್ನು ನಾವು ಕೊಡಬೇಕು ಎಂಬುದೇ. ಮತ್ತು "ಎಷ್ಟು" ಎಂಬುದರಲ್ಲಿ "ಯಾಕೆ" ಎಂಬುದಕ್ಕೆ ಆಧಾರವಾದಂತೆ ನಾವು ಕೊಡಬೇಕು. ಕ್ರೈಸ್ತರು ದೇವರಿಗೆ ಕೊಡವುದರ ಉದ್ದೇಶ ಗಳು ಯಾವವು?

ಬೋಧಕರು ಇತರರಿಗೆ ಕೊಡುವುದನ್ನು ಬೋಧಿಸುವಾಗ, ಅವರು, ಬಜೆಟ್‌ನ್ನು ನೀಗಿಸಲು ಇರುವಂಥ ಅನೇಕ ಪ್ರೇರಣೆಗಳನ್ನು ಕೊಡುತ್ತಾರೆ ಉದಾಹರಣೆ, ಅಥವಾ ಪರಲೋಕಕ್ಕೆ ಹೋಗಲು ನೀನು ಮಾಡಬೇಕಾದ ಖರ್ಚು ಅಥವಾ ನರಕದಿಂದ ದೂರವಿರಲು ನೀನು ಮಾಡಬೇಕಾದ ಖರ್ಚು ಎಂದು. ಕೆಲಸಾರಿ ಅಯೋಗ್ಯವಾದ ಪ್ರೇರಣೆಗಳು ಸಹ ಉಪಯೋಗಿಸಲ್ಪಡುತ್ತವೆ. ಉದಾಹರಣೆಗಾಗಿ ನಾವು ಕೊಡುವುದರ ಬಗೆಗೆ ಬಡಾಯಿ ಕೊಚ್ಚುಕೊಳ್ಳುವವಗರೂ ಆಗಿರುತ್ತೇವೆ. ಆದರೆ ನಾವು ಯಾಕೆ ಕೊಡಬೇಕು ಎಂದು ದೇವರು ಹೇಳುವಲ್ಲಿ ನಾವು ಅದಕ್ಕೆ ಲಕ್ಷಿವಹಿಸುವದು ಒಳ್ಳೆಯದು!

ದೇವರು ಎಂದಾದರೂ ಅಂಥ ಪ್ರೇರಣೆಗಳನ್ನು ಒದಿಸಿದ್ದಾನೆಯೋ? 2 ಕೊರಿಂಥ 8 ಮತ್ತು 9ನೇ ಅಧ್ಯಾಯಗಳಲ್ಲಿ ಆತನು ಹಾಗೆ ಮಾಡಿದ್ದಾನೆ. ಈ ಎರಡು ಅಧ್ಯಾಯಗಳಲ್ಲಿ ದೇವರ ಪ್ರೇರಣೆಯ ಮೂಲಕ ಪೌಲನು ಕೊರಿಂಥ ಸಭೆಯವರನ್ನು ವರ್ಷದ ಹಿಂದೆ ಅವರು ಮಾಡಿದ ಯೋಜನೆಯನ್ನು ಯೆರೂಸಲೇಮಿನ ಬಡ ದೇವ ಭಕ್ತರ ಪ್ರೊತ್ಸಾಹಿಸುವುದನ್ನು ಮುನ್ನಡೆಸುವುದರ ಬಗೆಗೆ ಪೌಲನು ಬರೆಯುವವನಾಗಿದ್ದಾನೆ. ಆತನು ಪ್ರತಿಪಾದಿಸುವ ಪ್ರೇರಣೆ ಗಳು ದೇವರು ಒದಗಿಸಿದ ಪ್ರೋತ್ಸಾಹವೇ ಆಗಿತ್ತು. ಅವರು ಕೊಡುವುದಕ್ಕೋಸ್ಕರವಾದ ದಿವ್ಯ ಪ್ರೋತ್ಸಾಹ ಹೊಂದಿದ್ದರು. ಅಂಥ ಪ್ರೇರಣೆಗಳನ್ನು ನಾವೂ ಪರಿಗಣಿಸುವವರಾಗಿರೋಣ.

### ನಾವು ಉದಾರವಾಗಿ ಕೊಡಬೇಕು ಯಾಕೆಂದರೆ ಕೊಡುವುದು ಕೃಪೆಯಾಗಿದೆ

2 ಕೊರಿಂಥ 8ರಲ್ಲಿ ಪೌಲನು ಹೀಗೆ ಹೇಳುವುದರ ಮೂಲಕ ಪ್ರಾರಂಭಿಸುತ್ತಾನೆ. "ಸಹೋದರರೇ, ಮೆಕೆದೋನ್ಯದ ಸಭೆಗಳಲ್ಲಿ ದೇವರ ಕೃಪೆಯು ತೋರಿದ ಬಗೆಯನ್ನು ನಿಮಗೆ ತಿಳಿಸುತ್ತೇವೆ" (ವಚನ 1). ಮೆಕೆದೋನ್ಯರು "ದೇವರ ಕೃಪೆ" ಯಂತೆ ಕೊಡುವವುರಾಗಿದ್ದರು ಎಂದು ಪೌಲನು ಇಲ್ಲಿ ಮಾತನಾಡುವವನಾಗಿದ್ದಾನೆ (ವಚನ 1).

2 ಕೊರಿಂಥ 8 ಮತ್ತು 9ರಲ್ಲಿ ದೇವರಿಗೆ ಕೃಪೆಯಂತಾಗಿದೆ ಎಂದು ಪೌಲನು ಹೇಳುತ್ತಾನೆ. ದೇವಜನರಿಗೋಸ್ಕರದ ಕೊಡುವಿಕೆಯ ವಿವರಣೆಯನ್ನು "ಧರ್ಮಕಾರ್ಯ" ಎಂದು ಆತನು ವರ್ಣಿಸಿದ್ದಾನೆ (8:6, 7, 19; 9:14). ವಾಸ್ತವವಾಗಿ, ಪೌಲನು "ಕೊಡವುದನ್ನು" ಮತ್ತು "ಕೃಪೆ" ಗಳನ್ನು ಹೆಚ್ಚಾಗಿ ಸಮೀಕರಿಸಿದ್ದಾನೆ. 2 ಕೊರಿಂಥ 8:19ರಲ್ಲಿ, "ಧರ್ಮಕಾರ್ಯ"

ಎಂದು ಆತನು ಮಾತನಾಡುವಂತದ್ದನ್ನು ಆತನು ಮುಂದಿನ ವಚನದಲ್ಲಿ "ಈ ಉದಾರ ವರ" ವರ್ಣಿಸಿದ್ದಾನೆ.

ಆತನು ಕೃಪೆಯಿಂದ ಕೊಡುವುದನ್ನು ಸಾಮರ್ಥವನ್ನು ಕೊಟ್ಟಿದ್ದಾನೆ. ಕೊಡುವದು ಕೃಪೆಯಾಗಿದೆ ಹಾಗೆಯೇ ವರವೂ ಆಗಿದೆ. *ದೇವರು ನಮಗೆ ಕೊಡುವ ಸಾಮರ್ಥವನ್ನು ಕೊಟ್ಟಿದ್ದಾನೆ.* ನಾವು ಕೊಡುವುದರಲ್ಲಿ ಸಮರ್ಥರಾಗಿರುತ್ತೇವೆ ಯಾಕೆಂದರೆ ದೇವರು ನಮ್ಮನ್ನು ಸಮರ್ಥರನ್ನಾಗಿಸಿದ್ದಾನೆ. ಬಡವರಿಗೆ ಸಹಾಯಿಸುವ ನಿಟ್ಟಿನಲ್ಲಿ ಮತ್ತು ಕಳೆದುಹೋದವರಿಗೆ ಸುವಾರ್ತೆಯನ್ನು ಬೋಧಿಸುವುದರಲ್ಲಿ ದೇವರು ನಮ್ಮ ಮೂಲಕ ಮಾಡುವವನಾಗಿದ್ದಾನೆ. *ನಾವು ಮಾಡುವ ಒಳ್ಳೆಯದನ್ನು ದೇವರು ಮಾಡುವವನಾಗಿದ್ದಾನೆ.* ಹೀಗೆ, ನಮ್ಮ ಕೊಡುವಿಕೆಯಿಂದಾಗಿ ಜನರು ದೇವರನ್ನು ಕೊಂಡಾಡುವವರಾಗಿರುತ್ತಾರೆ (2 ಕೊರಿಂಥ 9:11-14). ದೇವರು ಏನನ್ನು ಮೆಚ್ಚುವವನಾಗಿದ್ದಾನೆ? ಆತನು ಕೊಡುವವನಾಗಿದ್ದಾನೆ; ಆತನು ಪ್ರೀತಿಯಾಗಿದ್ದಾನೆ; ಆತನು ಕೃಪೆಯುಳ್ಳವನಾಗಿದ್ದಾನೆ. ಇದನ್ನು ಇತರರು ಹೇಗೆ ತಿಳಿಯುತ್ತಾರೆ? ಆತನ ಮಕ್ಕಳಾದ ನಾವು ಹೊಂದಿದೆಲ್ಲವನ್ನೂ ಉದಾರವಾಗಿ ಕೊಡುವುದನ್ನು ಪ್ರಾಯೋಗಿಸುವುದಾಗ ಮಾತ್ರವೇ ದೇವರು ಮೆಚ್ಚುವವನಾಗಿದ್ದಾನೆ ಎಂದು ಅವರು ತಿಳಿದಿದ್ದಾರೆ.

## ಮೆಕೆದೋನ್ಯರ ಉದಾಹರಣೆಯ ಕಾರಣದಿಂದಾಗಿ ನಾವು ಉದಾರವಾಗಿ ಕೊಡಬೇಕು

2 ಕೊರಿಂಥ 8:1-7ರಲ್ಲಿ ಮೆಕೆದೋನ್ಯರ ಉದಾಹರಣೆಯ ನಾಲ್ಕು ಸಂಗತಿಗಳನ್ನು ಗಮನಿಸಿರಿ.

### ವಿಪರೀತ ಬಡತನದಲ್ಲಿಯೂ ಅವರು ಕೊಟ್ಟರು

ನಾವು ಸರಿಸಮಾನವಾಗಿ ಕೊಡಬೇಕು ಎಂದು ನಾವು ತಿಳಿದ್ದೇವೆ (1 ಕೊರಿಂಥ 16:1, 2), ಮತ್ತು ಹೀಗೆ ಉದಾರವಾಗಿ ಕೊಡುವದು ಒಂದು ಸೂತ್ರವಾಗಿದೆ ಎಂದು ನಾವು ಯೋಚಿಸುವವರಾಗಿದ್ದೇವೆ: ಸಂಪತ್ತು ಮತ್ತು ಕರ್ತವ್ಯ ಎರಡು ಉದಾರತೆಯು ಸಮಾನವಾಗಿವೆ. ಒಬ್ಬ ಕ್ರೈಸ್ತನು ಸಂಪತ್ತುಳ್ಳವನಾಗಿದ್ದರೆ, ಆತನ ಕರ್ತವ್ಯದ ಅರಿವು ಆತನನ್ನು ಉದಾರಾಗಿ ಕೊಡುವುದಕ್ಕೆ ಆಗ್ರಹಿಸುವುದಾಗಿದೆ. ಆದರೆ ಇಲ್ಲಿ ಕಂಡುಬರುವ ಸೂತ್ರವು ವಿಭಿನ್ನವಾದದ್ದು ಆಗಿದೆ ಅದು ಸಂತೋಷ ಮತ್ತು ಬಡತನ ಎರಡೂ ಸೇರಿ ಉದಾರತೆ ಆಗಿದೆ! ಈ ಮೆಕೆದೋನ್ಯರು ಶ್ರೀಮಂತರಾಅಲ್ಲ! ವಾಸ್ತವ ವಾಗಿ, ಅವರು "ವಾತ್ಸಲ್ಯದ ಶ್ರೇಷ್ಟ ಸತ್ವಪರೀಕ್ಷೆಯನ್ನು" ಮತ್ತು "ಕಡುಬಡತನವನ್ನು" ಅನುಭವಿಸುವವರಾಗಿದ್ದರು; ಹಾಗಿದ್ದಾಗ್ಯೂ "ಹೊರ ಸೂಸಿದ ಸಂತೋಷವು" ಮತ್ತು ಅವರ ಬಡತನ ಇವೆರಡರ ಪರಿಣಾಮವು "ಉದಾರತೆ ಸಂಪತ್ತಿನಲ್ಲಿ" ಇದೆ!

ನಾವು ಶ್ರೀಮಂತರಾಗಿ ಆತನಿಗೆ ಉದಾರವಾಗಿ ಕೊಡುವುದನ್ನು ಪ್ರಾರಂಭಿಸುವುದನ್ನು ದೇವರು ಅಪೇಕ್ಷಿಸುವುದಿಲ್ಲ ಎಂದು ಇದರಿಂದ ನಾವು ಕಲಿಯುವುದಾಗಿದೆ. ಬಡವಿಧವೆ ತನ್ನವೆ ಇದ್ದ ಕೇವಲ ಎರಡು ದುಗ್ಗಾಣಿಯನ್ನು ಕೂಡಾ ಉದಾರವಾಗಿಕೊಟ್ಟಳು (ಲೂಕ 21:1-4). ಆ ವಿಚಾರದಲ್ಲಿ ಸಹ, ಸಂತೋಷ ಬಡತನ ಉದಾರತೆ ಆಗಿದೆ.

ನಿನ್ನ ಬಗೆಗೆ ಏನು? ನೀನು ಕೊಡಬೇಕೆಂದು ಬಯಸಿದನ್ನು ಕೊಡಲು ನಿನ್ನ ಹತ್ತಿರ ಹೆಚ್ಚು ಹಣ ಬರುವತನಕ ಕಾಯುವಿಯಾ? ನೀನು ಬೋಧಕರಿಗೆ, "ನಾನು ಎರಡು ಮಿಲಿಯನ್ ಡಾಲರ್ ಹೊಂದಿದ್ದಾದರೆ, ನಾನು ಒಂದು ಮಿಲಿಯನ್ ಹಣವನ್ನು ದೇವರಿಗೆ ಕೊಡುವೆ" ಎಂದು ಹೇಳಿದ ಆ ಮನುಷ್ಯನ ಹಾಗಿರುವೆಯಾ? ಆಗ ಆ ಬೋಧಕರು "ಅದು ಸರಿ ಜಾನ್" ಆದರೆ ನೀನು ಎರಡು ಹಂದಿಯನ್ನು ಹೊಂದಿದ್ದಾದರೆ? "ಓಹಾ, ಇದು ಸರಿಯಾದುದಲ್ಲ, ನಾನು ಎರಡು ಹಂದಿಗಳನ್ನು ಹೊಂದಿದ್ದೇನೆಂದು ನೀನು ಬಲ್ಲೆಯಾ?" ನಾವು ಎರಡು

ಮಿಲಿಯನ್ ಹೊಂದುವ ತನಕ ಕಾಯುವುದು ಬೇಡ; ನಾವು ಏನನ್ನು ಹೊಂದಿದ್ದೇವೆಯೋ ಅದನ್ನು ಈಗಲೇ ಉದಾರವಾಗಿ ಕೊಡುವಾ!

**ಅವರು ಉದಾರವಾಗಿ ಕೊಟ್ಟರು**

ಅವರ ಹೇರಳವಾದ ಸಂತೋಷವು ಮತ್ತು ವಿಪರೀತವಾದ ಕಡುಬಡತನವು "ಉದಾರತೆಯ ಸಂಪತ್ತಿನಲ್ಲಿ" ತುಂಬಿಸೂಸಿತು! ಪೌಲನು ಅವರ ಉದಾರತೆಯನ್ನು, ಕೊರಿಂಥಿಯನ್ನರು ಉದಾರವಾಗಿ ಕೊಡಿಸುವುದಕ್ಕಾಗಿ ಬಳಸಿಕೊಂಡನು.

ಆತರದ ಕೊಡುವಿಕೆಯನ್ನು ದೇವರು ಬಯಸುವವನಾಗಿದ್ದಾನೆ. ಪಂಡಿರು ಉದಾರವಾಗಿ ಕೊಟ್ಟರು (ಮತ್ತಾಯ 2); ಬೆಥಾನ್ಯದ ಮರಿಯಳು ಉದಾರವಾಗಿ ಕೊಟ್ಟಳು (ಯೋಹಾನ 12:1-8); ದಾನಕೊಡುವವರು ಯಥಾರ್ಥ ಮನಸ್ಸಿನಿಂದ ಕೊಡಲಿ (ರೋಮಾಪುರ 12:8). ನೀನು ಕೊಟ್ಟಿದ್ದು ಸಾಕಷ್ಟಾಗಿದೆ ಎಂದು ನೀವು ತಿಳಿದಿದ್ದಾದರೆ, ನಿನ್ನನ್ನು ನೀನು: "ನಾನು ಉದಾರವಾಗಿ ಕೊಟ್ಟಿರುವೆನೇ?" ಎಂದು ಕೇಳಿಕೋ. ನೀನು ನಿನ್ನ ವರವನ್ನು ಉದಾರ ವರದಂತೆ ಸಂರಕ್ಷಿಸಲಾರೆ, ಇದು ದೇವರನ್ನು ಮೆಚ್ಚಿಸುವುದಾಗಿದೆ!

**ಅವರು ಶಕ್ತಿಯನ್ನು ಮೀರಿ ತಮ್ಮಷ್ಟಕ್ಕೆ ತಾವೇಕೊಟ್ಟರು**

ಅವರು ಹೇಗೆ ಕೊಟ್ಟರು ಎಂಬುದನ್ನು ಪ್ರಶಂಸಿಸುವತ್ತ ಮತ್ತು ಕೊಡುವುದರಲ್ಲಿನ ಅವರ "ರೀತಿಯು" ನಮಗಿಂತ ಹೇಗೆ ಭಿನ್ನವಾಗಿದೆ ಎಂದು ಯೋಚಿಸುವಾಗ, ಕೊಡುವುದರ ವಿಷಯದಲ್ಲಿ ಇಂದಿನ ಅನೇಕ ಸಭೆಗಳ ಬಗೆಗೆ ಏನನ್ನಬಹುದು? ಒಂದು ಅವಶ್ಯಕತೆಯು ಇಲ್ಲಿ ಉದ್ಭವಿಸುತ್ತದೆ. ಇದು ಕೇವಲ ಅವರ ವಾರದ ಆಯವ್ಯವನ್ನು, ಅಥವಾ ಅವರ ವಿಶೇಷ ಅವಶ್ಯಕತೆಯನ್ನು ನೀಗಿಸಲು ಇರಬಹುದು. ನಂತರ ಬೋಧಕ/ಅಥವಾ ಹಿರಿಯರು "ನಮಗೆ ಇಷ್ಟೊಂದು ಹಣದ ಅವಶ್ಯಕತೆಯು ಇದೆ. ದಯಮಾಡಿ ಸಹಾಯಮಾಡಿರಿ." ಎಂದು ಒಂದು ಉದ್ಘೋಷಣೆಯನ್ನು ಮಾಡುತ್ತಾರೆ. ಬಹುಶಃ ಕೊಡುಗೆಯು ಬರಬಹುದು; ಬರದೆ ಇರಬಹುದು. ಹೀಗಾಗಿ ಅಲ್ಲಿ ಹೆಚ್ಚಿನ ಉದ್ಘೋಷಣೆಗಳೂ, ಪ್ರಸಂಗಗಳೂ, ಮುಖ್ಯಾಂಶ ಲೇಖನಗಳೂ ನಡೆಯುತ್ತವೆ. ನಾಯಕರು "ದಯಮಾಡಿ ಕೊಡಿರಿ! ಈ ಅವಶ್ಯಕತೆಯನ್ನು ನೀಗಿಸಲು ಈ ಮೊತ್ತದ ಹಣವು ಅವಶ್ಯವಾಗಿದೆ ದಯಮಾಡಿ ಸಹಾಯಿಸಿರಿ" ಎಂದು ಸದಸ್ಯರನ್ನು ಮನವಿ ಮಾಡಿಕೊಳ್ಳುತ್ತಾರೆ.

ಮೆಕೆದನ್ಯರು ಹೇಗೆ ಕೊಟ್ಟರು ಎಂಬುದನ್ನು ನೆನಪಿಸಿಕೊಳ್ಳಿರಿ. ಅದು ಏನು ಹೇಳುತ್ತದೆ ಎಂಬುದರ ಬಗೆಗೆ ಯೋಚಿಸಿರಿ: ಅವರು ಉದಾರವಾಗಿ ಕೊಟ್ಟರು "ಶಕ್ತ್ಯಾನುಸಾರವಾಗಿ ... ಅವರು ಶಕ್ತಿಯನ್ನು ಮೀರಿ ತಮ್ಮಷ್ಟಕ್ಕೆ ತಾವೇ ಕೊಟ್ಟರು ದೇವಜನರಿಗೆ ಸಹಾಯ ಮಾಡುವ ಕೆಲಸದಲ್ಲಿ ತವು ಪಾಲುಗಾರರಾಗುವಂತೆ ಅಪ್ಪಣೆಗಬೇಕೆಂದು ನಮ್ಮನ್ನು ಬಹುವಾಗಿ ಬೇಡಿ ಕೊಂಡರು ... ನಾವು ನೆನಿಸಿದ ಪ್ರಕಾರ ಕೊಡದೆ ... ಕರ್ತನಿಗೆ ಒಪ್ಪಿಸಿಕೊಟ್ಟರು."

ಇದರೆಲ್ಲರ ಅರ್ಥವೇನು? ಇದು ಪೌಲ ಮತ್ತು ಮೆಕೆದೋನ್ಯರ ಮಧ್ಯ ಈ ತರದ ಸಂಭಾಷಣೆಯು ಸಂಭವಿಸಿರಬಹುದು. ಮೆಕೆದೋನ್ಯರು: ಪೌಲ, ಇದು ನಮ್ಮ ಕಾಣಿಕೆ. ನಮ್ಮ ವಾಗ್ದಾನ ಮಾಡಿದಂತದ್ದು.

ಪೌಲ: ಬಹಳ ವಂದನೆಗಳು. ಇಲ್ಲೇ, ಎಣಿಸುತ್ತೇನೆ ಇರಿ ... ಹುಂ. ಇಲ್ಲಿ ನಾನು ಎಣಿಸಿದ್ದಕ್ಕಿಂತ ಹೆಚ್ಚಿನದು ಇಲ್ಲಿದೆಯಲ್ಲ.

ಮೇಕೆದೋನ್ಯರು: ನಾವು ಅಷ್ಟನ್ನು ಕೊಡಬೇಕಂದು ಯೋಚಿಸಿದ್ದೆವು.

ಪೌಲ: ನೀವು ನಿಜವಾಗಿಯೂ ನಿಮ್ಮ ಆದಾಯ ಪ್ರಕಾರ ಕೊಟ್ಟಿದ್ದೀರಿ.

ಮೆಕೆದೋನ್ಯರು: ನಾವು ಹಾಗೆ ಬಯಸಿದ್ದೆವು. ಕ್ರೈಸ್ತರು ತಾವು ಹೊಂದಿದಂತಹದ್ದನ್ನು

ಆಶೀರ್ವಾದದ ಪ್ರಕಾರ ಕೊಡಬೇಕು ಎಂಬುದನ್ನು ನಾವು ಬಲ್ಲೆವು.

ಪೌಲ: ಆದರೆ ನೀವು ಹೊಂದಿದದಕ್ಕಿಂತ ಹೆಚ್ಚಿನದು ಇಲ್ಲಿದೆ. ಇದು ನೀವು ಕೊಡಲು ಶಕ್ತ ವಾದದ್ದಕ್ಕಿಂತಲೂ ಹೆಚ್ಚಿನದಾಗಿದೆ. ನೀವು ಎಷ್ಟು ಬಡವರಾಗಿದ್ದೀರಿ ಎಂದು ನಾವು ಬಲ್ಲೆವು. ಯಾವ ತರದ ವಾತ್ಸಲ್ಯವು ಆ ಸಮಯದಲ್ಲಿ ನಿಮಗಿರಬಹುದು. ನೀವು ನಿಜ ವಾಗಿಯೂ ಅಷ್ಟೊಂದು ಕೊಡಲು ಶಕ್ತರಾಗಿಲ್ಲ!

ಮೆಕೆದೋನ್ಯರು: ಆದರೆ ನಾವು ಅದನ್ನು ಬಯಸಿದ್ದೇವೆ; ಕರ್ತನು ನಮಗೆ ಮಾಡಿದ್ದುದರ ಕಾರಣದಿಂದ ಮತ್ತು ಇತರರೊಂದಿಗೆ ಹಂಚಿಕೊಳ್ಳುವ ಅವಕಾಶವು ಸಿಕ್ಕಿದ್ದರಿಂದ ನಾವು ಆಶೀರ್ವಾದವುಳ್ಳವರಾಗಿದ್ದರಿಂದ ನಾವ ಬಲು ಸಂತೋಷವನ್ನು ಅನುಭವಿಸಿದೆವು!

ಪೌಲ: ನಿಮ್ಮಲ್ಲಿ ತುಂಬಿದ ಈ ಸಂತೋಷವನ್ನು ನಾನು ಪ್ರಶಂಸಿಸುವವನಾಗಿದ್ದೇನೆ, ಆದರೆ ನಿಮಗೆ ಹಾಗೆ ಮಾಡಲು ನಾನು ಬಿಡುವುದಿಲ್ಲ - ನೀವು ಬಡವರಾಗಿದ್ದೀರಿ, ಇದನ್ನು ಹೊರಲು ನಿಮ್ಮಿಂದ ಸಾಧ್ಯವಿಲ್ಲ. ಇದು ನಿಮಗೆ ಸರಿಯಾದುದ್ದಲ್ಲ! ಇತರರಿಗೆ ಸಹಾಯ ಮಾಡಲು ನಿಮಗೆ ನೀವೇ ಕೆಡಿಗೆ ಈಡಾಗುತ್ತಿದ್ದೀರಿ! ಇದರಲ್ಲಿ ಅಲ್ಪವಾದರೂ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳಿರಿ!

ಮೆಕೆದೋನ್ಯರು: ಇಲ್ಲ ಪೌಲ, ನೀವು ಇದನ್ನು ಹೊರಲು ನಿಮ್ಮಿಂದ ಸಾಧ್ಯವಿಲ್ಲ. ಇದು ನಿಮಗೆ ಸರಿಯಾದುದಲ್ಲ! ಇತರರಿಗೆ ಸಹಾಯ ಮಾಡಲು ನಿಮಗೆ ನೀವೇ ಕೆಡಿಗೆ ಈಡಾಗುತ್ತಿದ್ದೀರಿ! ಇದರಲ್ಲಿ ಅಲ್ಪವಾದರೂ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳಿರಿ!

ಪೌಲ: ಇಲ್ಲ ಸಾಧ್ಯವಿಲ್ಲ! ನೀವು ಅತೀ ಹೆಚ್ಚಿನದನ್ನು ಕೊಟ್ಟಿದ್ದೀರಿ! ನೀವು ಅಷ್ಟೊಂದು ಕೊಡಕೂಡದು. ನೀವು ಇದನ್ನು ಹಿಂದಕ್ಕೆ ತೆಗೆದುಕೊಳ್ಳಿರಿ!

ಮೆಕೆದೋನ್ಯರು: ಇಲ್ಲ, ನಾವು ಹಿಂದಕ್ಕೆ ತೆಗೆದುಕೊಳ್ಳಲಾರೆವು ನಾವು ಕೊಡುವುದಕ್ಕೆ ಪಟ್ಟುಹಿಡಿಯುತ್ತೇವೆ.

ಪೌಲ: ನಾನು ಆಗ್ರಹಿಸುತ್ತೇನೆ. ನೀವು ಕೊಡುವದು ಬಹಳವಾಗಿದೆ.

ಮೆಕೆದೋನ್ಯರು: ಅದನ್ನು ನೀನು ತೆಗೆದುಕೊಳ್ಳಲೇಬೇಕೆಂದು ನಾವು ಆಗ್ರಹಪಡಿಸುವವ ರಾಗಿದ್ದೇವೆ. ನಾವು ಅದನ್ನು ಮನಪೂರ್ವಕವಾಗಿ ಕೊಡುತ್ತಿದ್ದೇವೆಯೇ ಹೊರತು, ಬಲಾತ್ಕಾರದಿಂದ ಅಲ್ಲ.

ಪೌಲ: ಇಲ್ಲ, ಇಲ್ಲ, ಇಲ್ಲ ನಿಮ್ಮ ಇಷ್ಟೊಂದು ಹಣವನ್ನು ನಾನು ತೆಗೆದುಕೊಳ್ಳಲಾರೆನು!

ಮೆಕೆದೋನ್ಯರು: ಸರಿ, ನಾವಿಷ್ಟು ಆಗ್ರಹಿದಾಗ್ಯೂ ನೀನು ನಮ್ಮನ್ನು ಕೇಳಲಿಲ್ಲವಾದರೆ ಇದಕ್ಕಾಗಿ ನಾವು ನಿನ್ನಲ್ಲಿ ಬೇಡಿಕೊಳ್ಳುತ್ತೇವೆ! ನಮ್ಮ ಮೊಣಕಾಲುಗಳ ಮೇಲೆ ಬಿದ್ದು ಬೇಡಿಕೊಳ್ಳುತ್ತೇವೆ. ಯಮಾಡಿ ಈ ಕಾಣಿಕೆಯೆಲ್ಲವನ್ನು ತೆಗೆದುಕೋ. ನಾವು ಕೊಡಬಯಸುವುದನ್ನು ಕೊಡುವುದಕ್ಕೆ ನಮಗೆ ಅವಕಾಶ ಕೊಡು ಎಂದು ನಾವು ಅಗ್ರಹಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ಪೌಲ: ಆದರೆ ನೀವು ಕೊಟ್ಟದ್ದು ಬಹಳವಾಗಿದೆ ...

ಮೆಕೆದೋನ್ಯರು: ನಾವು ಪ್ರತಿಪಾದಿಸುವವರಾಗಿದ್ದೇವೆ; ನಿನ್ನನ್ನು ಆಗ್ರಹ ಪೂರ್ವಕವಾಗಿ ಪ್ರಾರ್ಥಿಸುವವರಾಗಿದ್ದೇವೆ. ದಯಮಾಡಿ ಅದನ್ನು ಕೊಡಲು ...

ಪೌಲ: ಸರಿ ನೀವು ನನ್ನನ್ನು ಅಗ್ರಹಪೂರ್ವಕವಾಗಿ ಬೇಡಿಕೊಂಡದ್ದರಿಂದ, ಒಳ್ಳೆಯ ಕಾರಣವನ್ನು ಈ ಭಾಗವು ಹೊಂದಿದ್ದರಿಂದ ನಿಮ್ಮ ಆರ್ಥಿಕತೆಯನ್ನು ಮೀರಿ ಇರುವ ನಿಮ್ಮ ಕಾಣಿಕೆಯನ್ನು ನಾನು ತೆಗೆದುಕೊಳ್ಳುತ್ತೇನೆ.

ಈಗಿರುವ ಪ್ರಶ್ನೆಯೆಂದರೆ, ನಮ್ಮ ಕೊಡುಗೆ ಮೆಕೆದೋನ್ಯರೊಂದಿಗೆ ಹೇಗೆ ಹೋಲಿಕೆ ಯಾಗುತ್ತದೆ? ಅವರೊಂದಿಗೆ ಹೋಲಿಸಿದ್ದಾದರೆ, ವೈಯಕ್ತಿಕವಾಗಿ ನಾವು ಎಷ್ಟನ್ನು ಕೊಡ ಬೇಕು? ನಮ್ಮ ವಾರದ ಕೊಡುಗೆ ಎಷ್ಟಾಗಿರಬೇಕು?

## ಅವರು ಮೊದಲು ತಮ್ಮನ್ನು ಒಪ್ಪಿಸಿದರು

"ಮೊದಲು ತಮ್ಮನ್ನೇ ಕರ್ತನಿಗೆ ಒಪ್ಪಿಸಿಕೊಟ್ಟರು; ನಂತರ ದೇವರ ಚಿತ್ತಾನುಸಾರವಾಗಿ ನಮಗೂ ತಮ್ಮನ್ನು ಒಪ್ಪಿಸಿದರು" ಎಂದು ಪೌಲನು ಹೇಳುತ್ತಾನೆ. ಮೆಕೆದೋನ್ಯರು ಉದಾರಿಗಳು ಆಗಿದ್ದರು ಎಂಬುದರಲ್ಲಿ ಯಾವ ಆಶ್ಚರ್ಯವೂ ಇಲ್ಲ! ಅವರು ಮೊದಲು ತಮ್ಮನ್ನು ಕೊಟ್ಟರು! ಯೇಸು ಕ್ರಿಸ್ತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡು ನಿಮ್ಮನ್ನು ನೀವು ಮೊದಲು ಕೊಟ್ಟಿದ್ದಾರೆ, ಉದಾರವಾಗಿ ಕೊಡುವದು ಅದ್ನು ಹಿಂಬಾಲಿಸುವದು!

ಇಲ್ಲಿರುವ ಸಮಸ್ಯೆಂದರೆ ಕ್ರಿಸ್ತನ ಶಿಷ್ಯರಾದ ಮೇಲೆ ಅದು ನಮ್ಮ ಹಣಕ್ಕೆ ಯಾವುದೇ ರೀತಿಯ ಪರಿಣಾಮಬೀರಬಾರದು ಎಂಬ ವಿಚಾರವನ್ನು ನಾವು ನಮ್ಮ ಮನದಲ್ಲಿ ಮಾಡಿಕೊಂಡಿರುತ್ತೇವೆ. ನಾವು ಕಾರ್ಟೂನಿನಲ್ಲಿ ಚಿತ್ರಿಸಲಾದ ಚಿತ್ರದ ಹಾಗೆ ಪ್ರಯತ್ನವನ್ನು ನಾವೂ ಮಾಡುವವರಾಗಿದ್ದೇವೆ. ಒಬ್ಬ ಮನುಷ್ಯನು ದೀಕ್ಷಾಸ್ನಾನ ಹೊಂದಿದ್ದನ್ನು ಅಲ್ಲಿ ತೋರಿಸಲಾಗಿದೆ. ಆತನು ನೀರಿನೊಳಗೆ ಇದ್ದಾಗ್ಯೂ - ನೀರಿನಿಂದ ಮೇಲಕ್ಕೆ ಬರಲು ಒಂದು ಕೈಯನ್ನು ಕಾಯುತ್ತಿದ್ದಾನೆ, ತನ್ನ ಪರ್ಸನ್ನು ಗಟ್ಟಿಯಾಗಿ ಹಿಡಿದಿದ್ದಾನೆ. ಕೆಳಗಡೆ ಒಂದು ಲೇಖನಿ ಇದೆ "ದೇವರೇ ಎಲ್ಲವನ್ನೂ ತೆಗೆದುಕೋ ಆದರೆ ನನ್ನ ಪರ್ಸನ್ನು ಬಿಟ್ಟು." ನಾವು ನಮ್ಮನ್ನು ಎಲ್ಲವನ್ನೂ ಯೇಸುವಿಗೆ ಕೊಡಬಹುದು, ಆದರೆ ಪಾಕೆಟ್ ಅಲ್ಲ! ಆದರೆ ಇದು ಯೋಗ್ಯವಾದ ಸಂಭಾಷಣೆಯು ಅಲ್ಲ. "ಎಲ್ಲವೂ ಕ್ರಿಸ್ತನಿಗೆ ಅಂದರೆ ಜೇಬು - ಹಣ - ಮತ್ತು - ಎಲ್ಲವೂ!

ಪೌಲನು ಈ ಭಾಗದಲ್ಲಿನ ಪತ್ರದಲ್ಲಿ ತನ್ನ ಅನ್ವಯವನ್ನು ಪ್ರತಿಪಾದಿಸುತ್ತಾ ಹೀಗೆ ಸಮಾರೋಪಿಸುತ್ತಾನೆ. "ದೇವರ ಮೇಲಣ ನಂಬಿಕೆ ವಾಕ್ಚತುರ್ಯ ಜ್ಞಾನ ಸಕಲ ವಿಧವಾದ ಆಸಕ್ತಿ ನಮ್ಮ ಪ್ರೇರಣೆಯಿಂದ ನಿಮ್ಮಲ್ಲಿ ಹುಟ್ಟಿದ ಪ್ರೀತಿ ಎಲ್ಲಾ ವಿಷಯಗಳಲ್ಲಿ ಹೇಗೆ ಸಮೃದ್ಧರಾಗಿದ್ದೀರೋ ಹಾಗೆಯೇ ಈ ಧರ್ಮಕಾರ್ಯಗಳಲ್ಲಿಯೂ ಸಮೃದ್ಧರಾಗಿರಿ" (2 ಕೊರಿಂಥ 8:7). ಇದಕ್ಕೆ ಸಮಾನವಾದದನ್ನು ನಾವೂ ಹೀಗೆ ಹೇಳಬಹುದು. ಸಭೆಯು ಒಳ್ಳೆಕಾರ್ಯಗಳನ್ನು ಮಾಡುವಲ್ಲಿ ಮುಂದಿದೆ. ನೀವು ನಿಮ್ಮ ಸ್ನೇಹಿತನ ಅನಾರೋಗ್ಯದಲ್ಲಿ, ಮತ್ತೊಬ್ಬರನ್ನು ಕಾಳಜಿತೆಗೆದುಕೊಳ್ಳುವಲ್ಲಿ, ನಿಮ್ಮ ಉತ್ತಮ ಶಿಕ್ಷಕರಿಗಾಗುವಲ್ಲಿ, ಕರ್ತನ ಕೆಲಸ ಮಾಡುವಲ್ಲಿ ಸಹ ಹೀಗೆ ನೀವು ಶ್ಲಾಘನೆಗೆ ಒಳಗಾಗಿದ್ದೀರಿ ಈಗ ನಾನು ನಿಮ್ಮ ಮುಂದೆ ಒಂದು ಸವಾಲನ್ನು ಎಸೆಯುತ್ತೇನೆ: "ಎಲ್ಲಾ ವಿಷಯಗಳಲ್ಲಿ ಹೇಗೆ ಸಮೃದ್ಧರಾಗಿದ್ದೀರೋ ಹಾಗೆಯೇ ಈ ಧರ್ಮಕಾರ್ಯಗಳಲ್ಲಿಯೂ ಸಮೃದ್ಧಿರಾಗಿರಿ!" ಉದಾರತೆಗಾಗಿ ಜಗತ್ತಿನಲ್ಲಿ ಮತ್ತು ಸಹೋದರತ್ವದಲ್ಲಿ ಉದಾಹರಣೆಯಾಗುವುದನ್ನು ಕಲಿಯೋಣಾ.

## ಕರ್ತನಿಗಾಗಿ ನಮ್ಮ ಪ್ರೀತಿಗೋಸ್ಕರ ನಾವು ಉದಾರಿಗಳಾಗಿರಬೇಕು

2 ಕೊರಿಂಥ 8:8ರಲ್ಲಿ ಪೌಲನು ಕೊರಿಂಥವರದ ಕಾಣಿಕೆಯು, ಅವರ ಪ್ರೀತಿಯು ಸಾಧುವಾದದ್ದು ಎಂದು ತೋರಿಸುತ್ತಾನೆ. ವಚನ 24ರಲ್ಲಿ ಆತನು ಹೀಗೆ ಸೇರಿಸುತ್ತಾನೆ: "ಆದ ಕಾರಣ ನಿಮ್ಮ ಪ್ರೀತಿಯು ಯಥಾರ್ಥವಾದದ್ದೆಂಬುದನ್ನು ನಿಮ್ಮನ್ನು ನಾವು ಹೊಗಳಿದ್ದು ನ್ಯಾಯವೆಂಬುದನ್ನೂ ಇವರಿಗೂ ಸಭೆಗಳಿಗೂ ತೋರಿಸಿಕೊಡಿರಿ" ನೀನು ಕೊಡುವದು, ನೀನು ಕೊಡುವುದಕ್ಕೆ ಸಾಧ್ಯವಿರುವದನ್ನು ಹೋಲಿಸಿದಾಗ, ಅದು ನೀನು ಎಷ್ಟರ ಮಟ್ಟಿಗೆ ದೇವರನ್ನು ಪ್ರೀತಿಸುತ್ತೀ ಎಂಬುದಕ್ಕೆ ಸಾಕ್ಷಿಯಾಗಿರುವದು!

ಆದರೆ ನಾವು ಆತನಿಗೆ ಕೊಡುವುದಕ್ಕಿಂತ ಹೆಚ್ಚಾಗಿ ದೇವರನ್ನು ಪ್ರೀತಿಸಬೇಕು ಯಾಕೆ? 2 ಕೊರಿಂಥ 8:9ರಲ್ಲಿ, ಪೌಲನು "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವುದರಿಂದ ನಾವು ಐಶ್ವರ್ಯವಂತರಾಗಬೇಕಂದು ನಿಮಗೋಸ್ಕರ ಬಡವನಾದನು" ಎಂದು ಹೇಳುತ್ತಾನೆ. ನಮ್ಮ ಕರ್ತನು ನಮಗಾಗಿ ಏನು ಮಾಡಬಲ್ಲನು? "ಆತನು ಐಶ್ವರ್ಯವಂತನಾಗಿದ್ದನು ..."

ಪರಲೋಕದಲ್ಲಿ ಆತನ ಮಹಿಮೆಯನ್ನು ಊಹಿಸಿಕೊಳ್ಳಿರಿ! "ಆತನು ಬಡವನಾದನು ..." ಭೂಮಿಯ ಮೇಲಿದ್ದಾಗ ಆತನು ಮತ್ತು ಆತನು ನಮಗಾಗಿ ಮಹಿಮೆ ಹೊಂದಲಿರುವುದನ್ನು ಯೋಚಿಸಿರಿ. ಆತನು ಯಾಕೆ ನಮಗಾಗಿ ತ್ಯಾಗಮಾಡಿದನು? "ಅದು ನೀವು ... ಐಶ್ವರ್ಯವಂತರಾಗಲು ..." ಕ್ರಿಸ್ತನಿಗಿಂತಲೂ ಮುಂಚೆ ನಾವು ಕಳೆದುಹೋಗಿದ್ದೆವು, ನಿರೀಕ್ಷೆ ಯಿಲ್ಲದೆ ಆತ್ಮೀಕ ಬಡತನದಿಂದ ಹೊಡೆತಕ್ಕೊಳಗಾಗಿದ್ದೆವು. ನಾವು ಹೇಗೆ ನಿಂತುಕೊಳ್ಳುತ್ತೇವೆ? ನಾವು ರಕ್ಷಣೆಯನ್ನೂ ಪರಿಶುದ್ಧಾತ್ಮನನ್ನೂ ಪರಲೋಕದ ನಿರೀಕ್ಷೆಯನ್ನೂ ಹೊಂದಿದ್ದೇವೆ. ನಾವು ಬಡವರಾಗಿದ್ದೆವು; ಈಗ ಐಶ್ವರ್ಯವಂತರಾಗಿದ್ದೇವೆ! ನಾವು ನಮ್ಮ ಆಸ್ತಿಯನ್ನು ಎಲ್ಲಿ ಪಡೆಯುತ್ತೇವೆ? "ನೀನು ಆತನ ಬಡತನದ ಮೂಲಕ ಐಶ್ವರ್ಯವಂತನಾಗುವಿ." ಅದಕ್ಕಿಂತ ಎಷ್ಟರಮಟ್ಟಿಗೆ ಐಶ್ವರ್ಯವಂತರಾಗಬಲ್ಲೆವು?

ದೇವರ ವರದ ಯೋಗ್ಯವಾದ ಪ್ರತಿಕ್ರಿಯೆಯು ಯಾವುದಾಗಿರಬೇಕು? ನೀವು ದೇವರನ್ನು ಪ್ರೀತಿಸಬೇಕು, ಮತ್ತು ನಾವು ಕೊಡಲೇಬೇಕು! ನೀವು ದೇವರನ್ನು ಪ್ರೀತಿಸಬೇಕು, ಮತ್ತು ನಾವು ಕೊಡಲೇಬೇಕು! ನೀವು ದೇವರನ್ನು ಎಷ್ಟರಮಟ್ಟಿಗೆ ಪ್ರೀತಿ ಸುತ್ತಿರುವಿರಿ? ಆತನನ್ನು ಪ್ರೀತಿಸುತ್ತೇನೆ ಎಂದು ಹೇಳಿದ ಮಾತ್ರಕ್ಕೆ ಅದನ್ನು ಸಾಧಿಸಲು ಹೇಳುವುದಿಲ್ಲ. ನಿಮ್ಮ ಪ್ರೀತಿ ಯನ್ನು ಪ್ರಾಯೋಜಿಸಲು ಆತನಿಗೆ ಕೊಡಿರಿ! ನೀವು ಕೊಟ್ಟಾಗ, ನೀವು "ನಾನು ದೇವರನ್ನು ಇಷ್ಟರ ಮಟ್ಟಿಗೆ ಪ್ರೀತಿಸುವೆ" ಎಂದು ಹೇಳುವಿ. ನಿನ್ನ ಪ್ರೀತಿಯ ಸಾಕ್ಷಿಯ ಕೊಡುವಿಕೆಯಿಂದ ನೀನು ಸಂತೃಪ್ತನಾಗಿರುವಿರಾ?

## ನಮ್ಮ ವಾಗ್ದಾನಗಳನ್ನು ನೆರವೇರಿಸುವುದಕ್ಕಾಗಿ ನಮ್ಮನ್ನು ಸಮರ್ಪಿಸಿಕೊಳ್ಳಬೇಕು

2 ಕೊರಿಂಥ 8:10-15ನ್ನು ಗಮನಿಸಿರಿ.

ನಾವು ಎಷ್ಟನ್ನು ಕೊಡಬೇಕೆಂದು ದೇವರು ಬಯಸುವವನಾಗಿದ್ದಾನೆ? "ಪ್ರತಿಯೊಬ್ಬನೂ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ; ದುಃಖದಿಂದಾಗಲಿ ಬಲಾತ್ಕಾರ ದಿಂದಾಗಲಿ ಯಾರೂ ಕೊಡಬಾರದು; ಯಾಕೆಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು" (2 ಕೊರಿಂಥ 9:7). ಒಪ್ಪಿಕೊಂಡು ಕೊಡುವದು ಐಚ್ಛಿಕವಾಗಿ ಕೊಡುವುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನಷ್ಟಕ್ಕೆ ತಾನೇ ಕೊಡುವುದಕ್ಕಾಗಿ ನಿರ್ಧರಿಸಿದರೆ ಸಂತೋಷವಾಗಿ, ಸ್ವ ಇಚ್ಛೆಯಿಂದ ಕೊಡಲಿ ಬದಲಾಗಿ ಬಲಾತ್ಕಾರದಿಂದಲ್ಲ; ವೈಯಕ್ತಿಕವಾಗಿ ಯಾರೊಬ್ಬನೂ ನಿನಗೋಸ್ಕರ ಕೊಡನು; ಮತ್ತು *ಯೋಜಿತವಾದದ್ದನ್ನು* - ತನ್ನ "ಮನದಲ್ಲಿ ನಿರ್ಣಯಿಸಿಕೊಂಡಂತದ್ದನ್ನು ಪ್ರತಿಯೊಬ್ಬನು ಕೊಡಬೇಕು."

ಪೌಲನ ಅವಶ್ಯಕತೆಗಳನ್ನು ನೀಗಿಸುವುದಾಗಿ ಕೊರಿಂಥಿಯನ್ನರು ಒಂದು ವರ್ಷದ ಹಿಂದೆ ಪ್ರಮಾಣಮಾಡಿದ್ದರು (2 ಕೊರಿಂಥ 8:6, 10; 9:2). ಅವರು ಯೋಜಿಸಿದ ಪ್ರಕಾರ ಮಾಡಲು ಅಪೊಸ್ತಲರು ಈಗ ಒತ್ತಾಯಿಸುತ್ತಿದ್ದಾರೆ, "ಹೀಗೆ ಅವರು ಮನಸುಮಾಡುವುದಕ್ಕೆ ಸಿದ್ಧವಾ ಗುವದು" ಇದರ ಮೂಲಕ "ಸಂಪೂರ್ಣಗೊಳಿಸುವ" ದನ್ನು ಹೋಲಿಸುವುದಾಗಿದೆ (2 ಕೊರಿಂಥ 8:10, 11). ಅವರ ವಾಗ್ದಾನವನ್ನು ಏಕೆ ಪೂರೈಸಬೇಕು? ಒಂದು ಸಂಗತಿಯೆಂದರೆ, "ಕೊರಿಂಥಿಯನ್ನರು ಮಾಡಿದ ವಾಗ್ದಾನವನ್ನು ಪೌಲನು ಎಲ್ಲರಿಗೂ ಹೇಳಿದ್ದನು - ಅವರು ಕೊಡುವಲ್ಲಿ ಒಂದು ವೇಳೆ ವಿಫಲರಾಗಿದ್ದರೆ, ಪೌಲನು ಅವಮಾನಕ್ಕೆ ಈಡಾಗುತ್ತಿದ್ದನು ಹಾಗೇ ಅವರೂ ಸಹ" (2 ಕೊರಿಂಥ 9:1-5).

ಈ ವಿಚಾರವನ್ನು ನಮಗೆ ಹೇಗೆ ಅನ್ವಯಿಸಿಕೊಳ್ಳಬಹುದು? ಮೊದಲನೆಯದಾಗಿ, ನಮ್ಮ ಕೊಡುವಿಕೆಯು ಯೋಜನಾಬದ್ಧವಾಗಿರಬೇಕು ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕೊಡುವುದರಲ್ಲಿ ವಿಫಲವಾಗುವದು ಎಂದರೆ ನಮ್ಮನ್ನು ನಾವು ದೇವರಿಗೆ ಕೊಟ್ಟಾಗ ಮಾಡಲಾದ ವಾಗ್ದಾನವನ್ನು ವಿಧಿಯುಕ್ತವಾದ ವಾಗ್ದಾನವನ್ನು ಕಾಯ್ದುಕೊಳ್ಳದೆ ಇರುವದು ಆಗಿದೆ.

## ನಮ್ಮ ಕೊಡುವಿಕೆಯು ಪ್ರಾಮಾಣಿಕವಾಗಿ ನಿಭಾಯಿಸಲ್ಪಟ್ಟದ್ದಾಗಿರುವುದರಿಂದ ನಾವು ಕೊಡಬೇಕಾಗಿದೆ

2 ಕೊರಿಂಥ 8:16-9:5ರ ಬಗೆಗೆ ಯೋಚಿಸಿರಿ. ಆ ಸಂಗ್ರಹವು ಪ್ರಾಮಾಣಿಕವಾಗಿ ನಿಭಾಯಿಸಲ್ಪಟ್ಟದ್ದಾಗಿದೆ ಎಂದು ಖಚಿತಪಡಿಸಲು ಯಾವ ಕಾಳಜಿಯನ್ನು ಪೌಲನು ತೆಗೆದುಕೊಂಡನು ಎಂಬುದನ್ನು ಗಮನಿಸಿರಿ. ಕೆಲಸವು ಪ್ರಾಮಾಣಿಕವಾಗಿ ನೆರವೇರುತ್ತದೆ ಎಂದು ಅವರಿಗೆ ಖಚಿತ ಪಡಿಸಲು ತನ್ನೊಡನೆ ಪ್ರಯಾಣ ಮಾಡಲು ವಿವಿಧ ಸಭೆಗಳಿಂದ ಒಳ್ಳೆಯ ಜನರನ್ನು ಆರಿಸಿದನು. ಈ ವ್ಯವಸ್ಥೆಯಲ್ಲಿ ಆತನ ಉದ್ದೇಶವು: "ನಾವು ಪಾರುಪತ್ಯಮಾಡುವ ಈ ದ್ರವ್ಯ ಸಂಚಯದ ವಿಷಯದಲ್ಲಿ ಒಬ್ಬರೂ ನಮ್ಮ ಮೇಲೆ ತಪ್ಪು ಹೊರಿಸುವುದಕ್ಕೆ ಆಸ್ಪದವಿರಬಾರದು. ಯಾಕೆಂದರೆ ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವವಾದದ್ದನ್ನು ಯೋಚನೆಗೆ ತಂದುಕೊಳ್ಳುವವರಾಗಿದ್ದೇವೆ" (2 ಕೊರಿಂಥ 8:20, 21) ಎಂಬುದೇ.

ಇದರಿಂದ ನಮಗೆ ಕಲಿಯಲು ಎರಡು ಸಂಗತಿಗಳ ಅವಶ್ಯಕತೆಯು ಇದೆ: (1) ಇಂದು ಸಭೆಯ ಹಿರಿಯರು ತಮ್ಮ ಸಭೆಯ ಸಂಗತಿಗಳು ಪ್ರಾಮಾಣಿಕವಾಗಿ ನಡೆದಿವೆಯೆಂದು ಖಚಿತಪಡಿಸಿಕೊಂಡು ಅವುಗಳ ಪಾರುಪತ್ಯಯಲ್ಲಿ ಜಾಗರುಕರಾಗಿರಬೇಕು, "ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವವಾದದ್ದಾಗಿರಬೇಕು." (2) ಸಭೆಯ ಹಣವನ್ನು ಪಾರುಪತ್ಯಮಾಡುವಾಗ ಸಭೆಯ ಹಿರಿಯರು ಪ್ರಾಮಾಣಿಕತೆಯಿಂದಿರಲು ಬಲು ಜಾಗರೂಕತೆಯನ್ನು ತೆಗೆದುಕೊಳ್ಳಬೇಕು, ಕ್ರೈಸ್ತರು ಉದಾರವಾಗಿ ಕೊಡುವುದಕ್ಕೆ ಸಿದ್ಧರಾಗಿರುತ್ತಾರೆ.

## ನಮ್ಮ ಕೊಡುವಿಕೆಯ ಮೂಲಕ ನಾವು ಒಳ್ಳೆಯದನ್ನು ಮಾಡುವವರಾದ ಕಾರಣ ನಾವು ಕೊಡಬೇಕು

2 ಕೊರಿಂಥ 9:6-15ನ್ನು ನಾವು ಜೊತೆಯಲ್ಲಿಯೇ ಓದುವಾ.

### ನಮಗಾಗಿ

ಕೊರಿಂಥಿಯನ್ನರು ಒಂದು ವೇಳೆ ಉದಾರ ಮನಸ್ಸಿನಿಂದ ಕೊಡುವುದಾದರೆ, ದೇವರು ಪ್ರತಿಯೊಂದು ಆಶೀರ್ವಾದದಿಂದ ಅವರನ್ನು ಸಮೃದ್ಧಗೊಳಿಸುತ್ತಾನೆ ಹೀಗೆ ಅವರು ಯಾವಾಗಲೂ ಸಾಕಷ್ಟನ್ನು ಹೊಂದುತ್ತಾರೆ ಮತ್ತು ಎಲ್ಲಾ ಒಳ್ಳೆಯ ಕಾರ್ಯಗಳಿಗೆ ಸಹಾಯ ಮಾಡಲು ಸಮರ್ಥರೂ ಆಗುತಾತರೆ; ಅವರ ಸಂಪನ್ಮೂಲವು ದ್ವಿಗುಣವಾಗುತ್ತವೆ; ಮತ್ತು ಅವರು ಆ ನೀತಿವಂತಿಕೆಯ ಫಲವು ಬೆಳೆಯುತ್ತದೆ. ನಾವೂ ಸಹ ಅದೇ ರೀತಿಯಾಗಿ ಔದಾರ್ಯದಿಂದ ಕೊಟ್ಟಿದ್ದಾದರೆ ಅದೇ ರೀತಿಯಲ್ಲಿ ಆಶೀರ್ವಾದಕ್ಕೊಳಗಾಗುತ್ತೇವೆ. ನಾವು ದೇವರ ಕಾರ್ಯದಲ್ಲಿ ಪರಿಣಾಮಕಾರಿಯಾಗಿ ಕೆಲಸಮಾಡುತ್ತಿಲ್ಲ ಯಾಕೆಂದರೆ ನಾವು ಸಾಕಷ್ಟನ್ನು ಕೊಟ್ಟಿಲ್ಲ.

### ಇತರರಿಗಾಗಿ

2 ಕೊರಿಂಥ 9:12, 13ರನ್ನು ಗಮನಿಸಿರಿ, ಕೊರಿಂಥದವರ ಕಾಣಿಕೆಯು "ದೇವಜನರ ಅವಶ್ಯಕತೆಯ" ನ್ನಾಧರಿಸಿ ಒದಗಿಸುವುದಾಗಿಯೂ ಮತ್ತು ಇತರರು ಅದರ ಪ್ರಯೋಜನವನ್ನು ಕೊಡುವುದಾಗಿಯೂ ಇತ್ತು.

ನಿನ್ನ ಕೊಡುವಿಕೆಯ ಮೂಲಕ ಇತರರ ಎಷ್ಟು ಅವಶ್ಯಕತೆಗಳನ್ನು ನೀನು ಪೂರೈಸಬಹುದು?

ಬೈಬಲ್‌ನ್ನು ವರ್ಗದಲ್ಲಿ ಅಭ್ಯಾಸಿಸಲು, ಕ್ರಮವಾದ ಬೋಧನೆಗಾಗಿ ನಾವು ಸೇರಿಬರಲು ಯೋಗ್ಯವಾದ ಸ್ಥಳಾವಕಾಶವು ನಮಗಿದೆ. ಉಳಿದವರು ಕ್ರಮವಾಗಿ ಕಲಿಸಲ್ಪಡುತ್ತಾರೆ, ನಮ್ಮ ಪರೋಪಕಾರದ ಕಾರ್ಯಕ್ರಮಗಳಿಂದ ಜನರಿಗೆ ಸಹಾಯಿಸುವದು, ಮತ್ತು ಕಳೆದುಹೋದ ಇತರರಿಗೆ ಸುವಾರ್ತೆಯನ್ನು ಕೊಡಲು ಸ್ಥಾನ ಇವೆಲ್ಲವನ್ನೂ ನಾವು ಹೊಂದಿದ್ದೇವೆ. ನಿನ್ನ ಕೊಡುವ ಡಾಲರ್‌ಗಳ ಪ್ರತಿಫಲ ಕೇವಲ ನಿತ್ಯತ್ವದಲ್ಲಿ ಗೊತ್ತಾಗುವದು!

**ದೇವರಿಗಾಗಿ**

ಒಂದು ರೀತಿಯಲ್ಲಿ ನೋಡುವುದಾದರೆ ದೇವರ ಪ್ರಯೋಜನಕ್ಕಾಗಿ ನಾವು ಯಾವುದನ್ನೂ ನಾವು ಕೊಡುವುದಿಲ್ಲ. ದೇವರಿಗೆ ತನ್ನ ಉಳುವಿಕೆಗಾಗಿ ನಮ್ಮ ಕಾಣಿಕೆಯ ಅವಶ್ಯಕತೆಯು ಇಲ್ಲ. ಆದರೆ ಇನ್ನೊಂದು ರೀತಿಯಲ್ಲಿ, ದೇವರಿಗೆ ನಮ್ಮ ಸಹಾಯದ ಅವಶ್ಯಕತೆಯು ಇರಬಹುದು. ಮನುಕುಲದ ರಕ್ಷಣೆಗಾಗಿ ಒಂದೇ ಮಾರ್ಗವನ್ನು ದೇವರು ತನ್ನ ಜನರ ಮೂಲಕ ತರುವವನಾಗಿದ್ದಾನೆ. ನಮ್ಮನ್ನು ಮತ್ತು ನಾವು ಸಮರ್ಪಿಸಬೇಕಾದ ಹಣವನ್ನು ನಾವು ಸಮರ್ಪಿಸಿಕೊಳ್ಳುವಲ್ಲಿ ವಿಫಲವಾದರೆ ನಶಿಸಿಹೋಗುವವರನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲ ಮತ್ತು ದೇವರು ಎಲ್ಲರೂ ರಕ್ಷಿಸಲ್ಪಡಬೇಕೆಂದು ಅಪೇಕ್ಷಿಸುವವನಾಗಿರುವುದರಿಂದ (2 ಪೇತ್ರ 3:9), ಆ ರೀತಿಯಲ್ಲಿ ಆಗಲು ಆತನು ಬಯಸುವುದಿಲ್ಲ.

ಆದರೆ ಮುಖ್ಯ ಸಂಗತಿಯೆಂದರೆ ಕೊರಿಂಥಿಯನ್ನರ ಕಾಣಿಕೆಯು "ದೇವರಿಗೆ ಉಪಕಾರಸ್ತುತಿಯನ್ನು ಉತ್ಪಾದಿಸುವುದು" ಮತ್ತು "ದೇವರನ್ನು ಮಹಿಮೆಪಡಿಸುವದೇ" ಆಗಿತ್ತು. ಅದರ ಹಾಗೆಯೇ ನಮ್ಮ ಕಾಣಿಕೆಗಳ ಮೂಲಕ ಜರುಗಿದ ಹೆಚ್ಚಿನ ಒಳ್ಳೆಯ ಕೆಲಸಗಳು, ಹೆಚ್ಚು ಜನರು ದೇವರನ್ನು ಸ್ತುತಿಸುವಂತೆ ಮಾಡುವವಗಳೂ ಮತ್ತು ಉಪಕಾರ ಸ್ತುತಿಸಲ್ಲಿಸುವಂತೆ ಮಾಡುವವುಗಳೂ ಆಗಿವೆ! ವಾಸ್ತವವಾಗಿ ಅದು, ನಮ್ಮ ಧ್ಯೇಯವಾಗಿದೆ; ನಮಗೋಸ್ಕರ ಮಹಿಮೆಯನ್ನು ಪಡೆಯುವುದಲ್ಲ "ಜನರು (ನಮ್ಮ) ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ (ನಮ್ಮ) ತಂದೆಯನ್ನು ಕೊಂಡಾಡುವರು" (ಮತ್ತಾಯ 5:16).

**ಸಹೋದರತ್ವಕ್ಕಾಗಿ**

ಈ ಕಾಣಿಕೆಯ ಮುಖ್ಯ ಉದ್ದೇಶವು ಪೌಲನು ಕೆಲಸಮಾಡಿದ ಅನ್ಯಸಭೆಯ ಕ್ರೈಸ್ತರ ಸಭೆಗಳ ಜೊತೆ ಮತ್ತು ಯೂದಾಯದ ಯೆಹೂದಿ ಸಭೆಗಳ ಮಧ್ಯದ ಸಂಬಂಧವನ್ನು ಸುಧಾರಿಸುವುದೇ ಆಗಿತ್ತು. ಯೆರೂಸಲೇಮಿಗೆ, ಅನ್ಯಸಭೆಗೆ ಕ್ರೈಸ್ತರ ಸಭೆಗಳಿಗೆ ಕಾಣಿಕೆಯನ್ನು ಕಳಿಸುವುದರ ಮೂಲಕ ಯೆಹೂದಿ ಕ್ರೈಸ್ತರಿಗಾಗಿ ಮತ್ತು ಸಹೋದರತ್ವದ ಎರಡೂ ಭಾಗ ಅಂದರೆ ಯೆಹೂದಿಗಳು ಮತ್ತು ಅನ್ಯಜನಾಂಗಗಳನ್ನು ಪ್ರೀತಿಯಲ್ಲಿ ಬಂಧಿಸಿ ಪ್ರೀತಿಯನ್ನು ತೋರಿಸುವುದು ಆಗಿತ್ತು.

ಒಂದು ಸಭೆಯು ಇನ್ನೊಂದು ಸಭೆಗೆ ಸಹಾಯಮಾಡಿದಾಗ ಇದು ಸಂಭವಿಸುವುದಾಗಿದೆ; ಎರಡು ಸಭೆಗಳನ್ನು ಪ್ರೀತಿಯಲ್ಲಿ ಜೊತೆಯಾಗಿ ತರುವುದಾಗಿದೆ. ಪ್ರತಿ ಸಾರಿಯೂ ಯಾವುದೇ ಸಭೆಯು ಕೊಡುವ ಸಹಾಯವು ಎಲ್ಲರಿಗೂ ಸಹಾಯಕಾರಿಯಾಗಿದೆ. ಬರಪೀಡಿತರಾದ ಪೋಲಂಡದಲ್ಲಿನ ಜನರ ಅವಶ್ಯಕತೆಗಳನ್ನು ಪೂರೈಸಲು ಅನೇಕ ಸಭೆಗಳು ಸಹಾಯವನ್ನು ಕೊಟ್ಟಾಗ, ಸಮಸ್ತ ಸಹೋದರರು ಅವರ ಉದಾರತೆಯಿಂದ ಪ್ರಯೋಜನಪಡೆದರು.

## ಆತನು ನಮಗೇನು ಮಾಡಿದ್ದಾನೆ ಎಂಬುದಕ್ಕೆ ಪ್ರತಿಯಾಗಿ ನಾವು ಕೊಡುವುದಕ್ಕಾಗಿ ದೇವರು ಪ್ರೋತ್ಸಾಹಿಸುವವನಾಗಿದ್ದಾನೆ

2 ಕೊರಿಂಥ 9:15, "ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ" ಎಂದು ಹೇಳುತ್ತದೆ. ದೇವರು ಏನನ್ನು ಕೊಟ್ಟಿದ್ದಾನೋ ಅದನ್ನು ನಾವು ಕೊಡಲೇಬೇಕು

ಎಂದು ಇದು ಸೂಚಿಸುವುದಾಗಿದೆ.

ದೇವರು ಎಷ್ಟು ವರಗಳನ್ನು ನಮಗೆ ಕೊಟ್ಟಿದ್ದಾನೆ? ನಾವು ಹೊಂದಿದ ಎಲ್ಲಾ ಒಳ್ಳೆಯವುಗಳು ಆತನಿಂದ ಬಂದವುಗಳು ಆಗಿವೆ! ಆದರೆ ಅಲ್ಲಿ ಕೇವಲ ಒಂದೇ ಒಂದು "ವರ್ಣಿಸಲಸಾಧ್ಯವಾದ ಕಾಣಿಕೆ" ಆಗಿದೆ - ಈ ಒಂದೇ ಒಂದು ವರ ನಮ್ಮ ಅಧಿಕಾರದ ವಿವರವನ್ನು ಮೀರುವಂತದ್ದಾಗಿದೆ. ಅದೇನು? ಅದು ಆತನ ಕಾಣಿಕೆಯು ನಮ್ಮ ರಕ್ಷಣೆ ಗೋಸ್ಕರವಾಗಿ ಆತನ ಮಗನ ಮರಣವೇ ಆಗಿದೆ. ಆ ಕಾಣಿಕೆಯ ಬಗೆಗೆ ಪೌಲನು "ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" (ರೋಮಾಪುರ 5:8, 9; 1 ಯೋಹಾನ 3:16; ಯೋಹಾನ 3:16; ಎಫೆಸ 3:18, 19 ಸಹ ನೋಡಿರಿ).

ಕರ್ತನಿಗೆ ಹೆಚ್ಚಿನದನ್ನು ಕೊಡುವಲ್ಲಿ ಇದು ಎಂಥ ಅದ್ಭುತವಾದ ಪ್ರೇರಣೆಯಲ್ಲವೇ! ಉದಾರವಾಗಿ ಕೊಡುವವರ ಬಗೆಗೆ ಯೋಚಿಸುವಂತೆಯೇ ನಾವು ನಮ್ಮ ಪ್ರೀತಿ, ನಮ್ಮ ನಮ್ರತೆ, ನಮ್ಮ ವರಗಳು ಇವುಗಳನ್ನು ದೇವರು ಕೊಡಮಾಡಿದ ವರಗಳೊಡನೆ ಹೋಲಿಸಬೇಕು!

## ಮುಕ್ತಾಯ

ನಿನ್ನನ್ನು ನಿನಗೆ ಕೊಟ್ಟಿದ್ದಿಯಾ? ನೀನು ಕೊಡುವುದರ ಮೂಲಕ ಪರಲೋಕದ ಮಾರ್ಗವನ್ನು ಕೊಂಡುಕೊಳ್ಳಲಾರಿ. ನಂಬಿಕೆ ಮತ್ತು ದೇವರಲ್ಲಿ ಪ್ರೀತಿಯಿಡುವುದರಲ್ಲಿ ವಿಧೇಯತೆಯಲ್ಲಿ ಪ್ರತಿಕ್ರಯಿಸುವುದರ ಮೂಲಕ ನೀನು ಪರಲೋಕವನ್ನು ಪಡೆಯಬಹುದು. ನೀನು ಅದನ್ನು ಮಾಡಿದಾಗ, ನಿನ್ನ ಪಾಪಗಳು ಕ್ರಿಸ್ತನ ರಕ್ತದ ಮೂಲಕ ತೊಳೆಯಲ್ಪಡುತ್ತವೆ. ನಿನ್ನ ಹಣ-ನಿನ್ನದೆಲ್ಲವನ್ನು ಕೊಡುವಿಕೆಯು ನಂತರದಲ್ಲಿ ಬರುವುದಾಗಿದ್ದು ಇವುಗಳು ಪರಲೋಕ ತೆಗೆದುಕೊಳ್ಳುವ ಟಿಕೇಟುಗಳಾಗಲಾರವು, ಆದರೆ ದೇವರು ನಿನಗೇನು ಮಾಡಿದ್ದಾನೆ ಎಂಬುದಕ್ಕೆ ಕೃತಜ್ಞತೆಯನ್ನು ತೋರುವ ಭಾವವಾಗಿವೆ. ನಿನ್ನನ್ನೇ ನೀನು ಕೊಡು ... ಕೃಪೆಯಿಂದ ರಕ್ಷಿಸಲ್ಪಟ್ಟಿರು ... ಮತ್ತು ಹಣವನ್ನು ಕೊಡುವಿಕೆಯು ನಿನ್ನನ್ನು ಹಿಂಬಾಲಿಸುವದು.